ಸಂಖ್ಯೆ/ಎಚ್‌ಡಿಎಸ್‌ಸಿಎಲ್/ಪತ್ರಿಕಾ ಮಾಹಿತಿ/2017-18 ದಿನಾಂಕ : 13-11-2017

# ಪತ್ರಿಕಾ ಮಾಹಿತಿ

**ವಿಷಯ :** ದಿ: 13-11-2017 ರಂದು ಎಮ್.ಜಿ. ಮಾರ್ಕೆಟ್ (ದುರ್ಗದಬೈಲ) ದಲ್ಲಿ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ಮಾರುಕಟ್ಟೆ ಅಭಿವೃದ್ಧಿಯ ಯೋಜನೆಯಲ್ಲಿ ವ್ಯಾಪಾರಸ್ಥರ ಮತ್ತು ನಾಗರೀಕರ ಸಲಹೆಗಳನ್ನು ಪಡೆಯುವಲ್ಲಿ ಸಭೆಯನ್ನು ಜರುಗಿಸಿದ ಕುರಿತು ವರದಿ.

* * * * *

ದಿ: 13-11-2017 ರಂದು ಎಮ್.ಜಿ. ಮಾರ್ಕೆಟ್ (ದುರ್ಗದಬೈಲ) ದಲ್ಲಿ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ಮಾರುಕಟ್ಟೆ ಅಭಿವೃದ್ಧಿಯ ಯೋಜನೆಯಲ್ಲಿ ವ್ಯಾಪಾರಸ್ಥರ ಮತ್ತು ನಾಗರೀಕರ ಸಲಹೆಗಳನ್ನು ಪಡೆಯುವಲ್ಲಿ ಸಭೆಯನ್ನು ಪೂಜ್ಯ ಮಹಾಪೌರರಾದ ಶ್ರೀ ಡಿ. ಕೆ. ಚವ್ಹಾಣ ಇವರ ಅಧ್ಯಕ್ಷತೆಯಲ್ಲಿ ಸಂಘಟಿಸಿ ಜರುಗಿಸಲಾಯಿತು. ಸದರಿ ಸಭೆಯಲ್ಲಿ ಸ್ಮಾರ್ಟಸಿಟಿ ಯೋಜನೆಯ ಪರಿಕಲ್ಪನೆ ಯೋಜನೆ ಅನುಷ್ಠಾನ ಮತ್ತು ನಿರ್ಮಾಣದ ಅಂಶಗಳನ್ನು, ಯೋಜನೆಯ ಅನುಷ್ಠಾನದ ಹಂತ ಹಾಗೂ ವ್ಯಾಪಾರಸ್ಥರಿಂದ ಯೋಜನೆಗಳ ಅನುಷ್ಠಾನದಲ್ಲಿ ಸಲಹೆಗಳನ್ನು ಪಡೆದು ಮತ್ತು ಯೋಜನೆಯ ಉದ್ದೇಶವನ್ನು ಸ್ಮಾರ್ಟಸಿಟಿ ಯೋಜನೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್ ಇವರು ವಿವರಿಸಿದರು. ಸ್ಮಾರ್ಟಸಿಟಿ ಯೋಜನೆಯ ಪರಿಕಲ್ಪನೆ ಮತ್ತು ಡಿಜೈನ್ ಹಾಗೂ ಡ್ರಾಫ್ಟಿಂಗ್ ಕುರಿತು ವಿಶೇಷ ಪಿಪಿಟಿ ಯನ್ನು ಸ್ಮಾರ್ಟಸಿಟಿ ಯೋಜನೆಯ ಸಮಾಲೋಚಕ ಸಂಸ್ಥೆಯಾದ ಪಿಬಡ್ಲ್ಯೂಸಿ ಪರಿಣಿತ ತಜ್ಞ ಶ್ರೀ ಮಂದೀಪ ಇವರಿಂದ ವಿವರಿಸಲಾಯಿತು. ನಂತರ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರೊಂದಿಗೆ ಸಲಹೆಗಳನ್ನು ಪಡೆಯಲಾಗಿ ಈ ಕೆಳಗೆ ವಿವರಿಸಿದಂತೆ ವ್ಯಾಪಾರಸ್ಥರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

1. ಪ್ರಸ್ತುತ ವ್ಯಾಪಾರಸ್ಥರಿಗೆ ಪರ್ಯಾಯ ವ್ಯಾಪಾರ ವ್ಯವಸ್ಥೆ ಕುರಿತು ಯಾವುದೇ ಸ್ಪಷ್ಟ ಕಾರ್ಯಸೂಚಿ ತಯಾರಿಸಿರುವುದಿಲ್ಲ. ಪರ್ಯಾಯ ವ್ಯಾಪಾರದ ಕುರಿತು ಸ್ಪಷ್ಟ ಅಭಿಪ್ರಾಯ ನೀಡಲು ಕೋರಿರುವರು.
2. ಪ್ರಸ್ತುತ ಎಮ್.ಜಿ. ಮಾರ್ಕೆಟ್ ಹಳೇಯದಾದರೂ ಮೂಲಭೂತ ಸೌಕರ್ಯದ ಕೊರತೆ ಇರುವುದು, ಈ ಪ್ರದೇಶದಲ್ಲಿ ವ್ಯಾಪಾರ ಮಾಡುವ ಎಲ್ಲ ವ್ಯಾಪಾರಸ್ಥರಿಗೆ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡುವುದು
3. ಈಗಾಗಲೇ ಸಿಬಿಟಿ ಕ್ಷೇತ್ರದಲ್ಲಿ ನಿರ್ಮಾಣದ ಹಂತದಲ್ಲಿರುವ ಕಟ್ಟಡದ ಕೆಲಸ ನಿದಾನಗತಿಯಲ್ಲಿ ಇರುವುದರಿಂದ ಈಗಾಗಲೇ ಅಲ್ಲಿಯ ಪ್ರದೇಶದಲ್ಲಿ ಸ್ಥಳಾಂತರಿಸಿದ ವ್ಯಾಪಾರಸ್ಥರಿಗೆ ಇನ್ನೂ ಅಂಗಡಿಗಳು ಲಭ್ಯವಾಗಿಲ್ಲ, ಈ ಪ್ರದೇಶದಲ್ಲಿ ಕಳೆದ ಸುಮಾರು ವರ್ಷಗಳಿಂದ ವ್ಯಾಪಾರ ಮಾಡುತ್ತಲಿದ್ದು ಯೋಜನೆ ಅನುಷ್ಠಾನದಲ್ಲಿ ವಿಳಂಬವಾದಲ್ಲಿ ಪ್ರಸ್ತುತ ವ್ಯಾಪಾರಸ್ಥರಿಗೆ ಹಾಗೂ ಅವರನ್ನು ಅವಲಂಬಿತ ಕುಟುಂಬದ ಸದಸ್ಯರಿಗೆ ತೊಂದರೆ ಆಗುವುದು. ಕಾರಣ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವ್ಯಾಪಾರಸ್ಥರ ಹಿತಾಸಕ್ತಿ ಅವರ ಆರ್ಥಿಕ ತೊಂದರೆ ಆಗದಂತೆ ಯೋಜನೆಯನ್ನು ರೂಪಿಸಲು ತಿಳಿಸಿದರು.
4. ಇನ್ನು ಮುಂದೆ ಈ ಯೋಜನೆಯನ್ನು ಚರ್ಚಿಸುವಾಗ ವ್ಯಾಪಾರಸ್ಥರ ಸಂಘ-ಸಂಸ್ಥೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಗಣನೆಗೆ ತೆಗೆದುಕೊಂಡು ಸಮಾಲೋಚನೆ ಸಭೆಯನ್ನು ಸಂಘಟಿಸಬೇಕು. ವ್ಯಾಪಾರಸ್ಥರ ತೊಂದರೆಗಳಿಗೆ ಪಾಲಿಕೆಯು ಸ್ಪಂದಿಸಬೇಕು.

ಈ ಮೇಲ್ಕಂಡಂತೆ ಸದರಿ ಸಭೆಯಲ್ಲಿ ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು. ಸಭೆಯಲ್ಲಿ ಉಪಸ್ಥಿತರಿದ್ದ ಪಾಲಿಕೆಯ ಸದಸ್ಯರಾದ ಶ್ರೀ ಶಿವು ಮೆಣಸಿನಕಾಯಿ ಇವರು ಮಾತನಾಡಿ ಸ್ಮಾರ್ಟಸಿಟಿ ಯೋಜನೆಯ ಮಹತ್ವದ ಯೋಜನೆಯಾಗಿದ್ದು ತಮಗೆ ಪರ್ಯಾಯ ವ್ಯವಸ್ಥೆಯ ಕುರಿತು ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಮ್ಮೆಲ್ಲರ ಸಹಕಾರ ಮಾರುಕಟ್ಟೆ ಅಭಿವೃದ್ದಿಗೆ ಇರಲಿ, ವಾರ್ಡ ಸದಸ್ಯರಾದ ಶ್ರೀಮತಿ ಕಮಲಾಕ್ಷಿ ಅಂದಾನಪ್ಪ ಸಜ್ಜನರ ಇವರು ಮಾತನಾಡಿ ಅವಳಿನಗರಕ್ಕೆ ಸ್ಮಾರ್ಟಸಿಟಿ ಯೋಜನೆ ಅತೀ ಅವಶ್ಯವಿದ್ದು ತಮಗೆ ಪರ್ಯಾಯ

ವ್ಯವಸ್ಥೆಯೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸೋಣ ತಾವೆಲ್ಲ ಸಹಕರಿಸಬೇಕೆಂದು ಕೋರಿದರು. ಪೂಜ್ಯ ಮಹಾಪೌರರಾದ ಶ್ರೀ ಡಿ. ಕೆ. ಚವ್ಹಾಣ ಇವರು ಮಾತನಾಡಿ ಇನ್ನು ಮುಂದೆ ಸಭೆಯನ್ನು ವ್ಯವಸ್ಥಿತವಾಗಿ ಸಂಘಟನೆ ಮಾಡಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಹಿರಿಯರನ್ನು ಗೌರವಿಸಿ ಅವರ ಮೂಲಕ ಯೋಜನೆಯ ಉದ್ದೇಶದ ಕುರಿತು ಸಮಾಲೋಚನೆ ನಡೆಸಲಾಗುವುದು. ಪಾಲಿಕೆಯಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ಚರ್ಚಿಸಿ ತೀರ್ಮಾನಿಸಲಾಗುವುದೆಂದು ತಿಳಿಸಿದರು. ಸ್ಮಾರ್ಟಸಿಟಿ ಯೋಜನೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್ ಇವರು ಮಾತನಾಡಿ ಇನ್ನೂ ಹಲವಾರು ಸುತ್ತಿನ ಸಭೆಗಳನ್ನು ವ್ಯವಸ್ಥಿತವಾಗಿ ಸಂಘಟಿಸಿ ಸಮಾಲೋಚನೆಯೊಂದಿಗೆ ಅಂತಿಮ ಚಿತ್ರಣ ತಯಾರಿಸಿ ತಮ್ಮ ಸಹಕಾರದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿ ಸಭೆಯಲ್ಲಿ ಬಾಗವಹಿಸಿದ ವ್ಯಾಪಾರಸ್ಥರಿಗೆ ಹಾಗೂ ಗೌರವಾನ್ವಿತ ಮಹಾಪೌರರು, ಪಾಲಿಕೆಯ ಸದಸ್ಯರು ಮತ್ತು ಅಧಿಕಾರಿಗಳಿಗೆ ಅಭಿನಂದಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸದರಿ ಸಭೆಗೆ ಅಂದಾಜು 450 ವ್ಯಾಪಾರಸ್ಥರು ಬಾಗವಹಿಸಿದ್ದರು. ಈ ವರದಿಯೊಂದಿಗೆ ಸಮಾಲೋಚನಾ ಸಭೆಯ ಫೋಟೋಗಳನ್ನು ಲಗತ್ತಿಸಿ ಕಳಿಸಲಾಗಿದೆ.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿ
ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ–ಮೇಲ್ :** sohdsmartcity@gmail.com

**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ ಕಾಲೇಜ ಆವರಣ ವಿದ್ಯಾನಗರ, ಹುಬ್ಬಳ್ಳಿ